ಕರ್ನಾಟಕ ವಿಧಾನಸಭೆ

ಗುರುವಾರ, ದಿನಾಂಕ: 14ನೇ ಅಕ್ಟೋಬರ್, 2010ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನನ್ನದೊಂದು submission ಇದೆ.

ಅಧ್ಯಕ್ಷರು : ಆಯಿತು, ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಎರಡನೇ ಬಾರಿಗೆ ಇವತ್ತು ಸರ್ಕಾರ ವಿಶ್ವಾಸಮತ ಯಾಚನೆ ಮಾಡಲಿಕ್ಕೆ ಈ ಸಭೆಯನ್ನು ಕರೆದಿದ್ದೀರಿ. ನಾವೂ ಕೂಡ ನಿಮಗೆ ಗೌರವ ಕೊಟ್ಟು ಇವತ್ತಿನ ಸಭೆಯಲ್ಲಿ participate ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ರಾಜ್ಯಪಾಲರ ಆದೇಶದ ಮೇರೆಗೆ ಸರ್ಕಾರ ವಿಶ್ವಾಸ ಮತ ತೆಗೆದುಕೊಳ್ಳಲಿಕ್ಕೆ 11ನೇ ತಾರೀಖು ಒಂದು ಸಭೆ ಕರೆದಿದ್ದೀರಿ. ಅವತ್ತು ..

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇವತ್ತು ಏನು ಆಗುವುದಿಲ್ಲ. ಆದ್ದರಿಂದ, ತಮ್ಮ ಪೀಠದ ಮುಂದಿರುವ ಮಾರ್ಷಲ್‌ಗಳನ್ನು ದಯವಿಟ್ಟು ಹೊರಗಡೆ ಕಳುಹಿಸಿ.

ಶ್ರೀ ಸಿದ್ದರಾಮಯ್ಯ : ಏನೂ ಆಗುವುದಿಲ್ಲ ಬಿಡಿ. ಏಕೆಂದರೆ, ಇವತ್ತು ಗಲಾಟೆ ಮಾಡಿ ಎಂದರೂ ಸಹ ನಾವು ಗಲಾಟೆ ಮಾಡುವುದಿಲ್ಲ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಬೇಡ. ತಾವು submit ಮಾಡುವುದನ್ನು ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ : ಚರ್ಚೆಯಲ್ಲ, ನಾನು submission ಮಾಡುತ್ತಿದ್ದೇನೆ.

ಅಧ್ಯಕ್ಷರು : ತಾವು submit ಮಾಡಿ.

SRI SIDDARAMAIAH : I wanted to make a submission.

ಅಧ್ಯಕ್ಷರು : Yes, ಅದನ್ನೇ ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವತ್ತಿನ ದಿವಸ ನಾವು ಏಕೆ ಸ್ವಲ್ಪ ಪ್ರತಿಭಟನೆ ಮಾಡಿದೆವು ಎಂದರೆ, ಪೊಲೀಸ್‌ನವರು ಆ ದಿನ ಗೇಟ್ ಹಾಕಿ, ನನ್ನನ್ನೇ ಸಹ ಒಳಕ್ಕೆ ಬಿಡಲಿಲ್ಲ. ಆ ದಿನ ಪೊಲೀಸ್ ಕಮಿಷನರ್‌ರವರೇ ಗೇಟ್‌ನಲ್ಲಿ ಬೀಗ ಹಾಕಿಕೊಂಡು ನಿಂತಿದ್ದರು. ಅಂದು ನಡೆದ facts ಅನ್ನು ನಾನು ಈಗ ಹೇಳುತ್ತಿದ್ದೇನೆ. ಅದಕ್ಕೋಸ್ಕರ ನಾವು ಅವತ್ತು ಪ್ರತಿಭಟನೆ ಮಾಡಬೇಕಾದಂತಹ ಸನ್ನಿವೇಶ ನಿರ್ಮಾಣವಾಯಿತು. ಇಲ್ಲದಿದ್ದರೆ ನಾವು ಅವತ್ತು participate ಮಾಡಬೇಕು, voting ನಲ್ಲೂ ಸಹ participate ಮಾಡಬೇಕೆಂದಿದ್ದೆವು...

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ರೀತಿ ಮಾಡಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು : Please, ಅವರಿಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಅವತ್ತು votingನಲ್ಲಿ participate ಮಾಡಬೇಕು, division ಕೇಳಬೇಕು, division ನಲ್ಲಿ ತಲೆ ಎಣಿಕೆ ಎಲ್ಲಾ ಆಗಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ನಾವು ಸದನಕ್ಕೆ ಬಂದಿದ್ದೆವು. ಆದರೆ ದುರದೃಷ್ಟವಶಾತ್ ಕರ್ನಾಟಕದ ಈ ವಿಧಾನ ಸಭೆಯ ಇತಿಹಾಸದಲ್ಲಿ ಯಾವತ್ತೂ ಕೂಡ ಪೊಲೀಸ್‌ನವರು with uniform and weapon ಒಳಗಡೆ ಬಂದಿರಲಿಲ್ಲ. ನನಗೆ ಅನುಭವ ಇರುವ ಮಟ್ಟಿಗೆ ಮತ್ತು ನಿಮಗೆ ಅನುಭವ ಇರುವ ಮಟ್ಟಿಗೆ, ಕರ್ನಾಟಕ ವಿಧಾನ ಸಭೆಯ ಇತಿಹಾಸದ ಮಟ್ಟಿಗೆ ಯಾವತ್ತೂ ಕೂಡ ಈ ರೀತಿ ಪೊಲೀಸ್ ಒಳಗೆ ಬಂದಿರಲಿಲ್ಲ. ಆ ಕಡೆ ಬಂದರೆ, ಅಲ್ಲಿ ಬೀಗ ಹಾಕಲಾಗಿತ್ತು. ಈ ಕಡೆ ಬಂದರೆ, ಇಲ್ಲಿ ಬೀಗ ಹಾಕಲಾಗಿತ್ತು. ವಾಸ್ತುವನ್ನು ನೋಡಿಯೇ ಮಾನ್ಯ ಕೆಂಗಲ್ ಹನುಮಂತಯ್ಯನವರು ಈ ವಿಧಾನ ಸೌಧವನ್ನು ಕಟ್ಟಿದ್ದಾರೆಂದು ನಾನು

ಅಂದುಕೊಂಡಿದ್ದೇನೆ. ಆದರೆ, ಈ ತರಹ ತಡೆದು ನಮ್ಮ ಹಕ್ಕುಗಳನ್ನು ಮೊಟಕುಗೊಳಿಸುವುದು it is a breach of privilege according to me. It is a different matter. ಇನ್ನೊಂದು ಸಾರಿ ಆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅವತ್ತಿನ ಪೊಲೀಸ್‌ನವರ ವರ್ತನೆಯಿಂದಾಗಿ ನಾವು ಅಂದು ಪ್ರತಿಭಟನೆ ಮಾಡಿದೆವು. Otherwise ನಾವು ಶಾಂತಿಯುತವಾಗಿ participate ಮಾಡಬೇಕೆಂದು ಬಂದಿದ್ದೆವು. ಇವತ್ತೂ ಕೂಡ participate ಮಾಡುತ್ತೇವೆ. It is a different aspect. ಆದರೆ ಒಂದು ನಾನು ನಿಮ್ಮಲ್ಲಿ ಮನವಿ ಏನು ಮಾಡುತ್ತಿದ್ದೇನೆಂದರೆ, ಅವತ್ತು 11ನೇ ತಾರೀಖು House was not in order. Pandemonium was created. Nobody knows what has happened here. ಆಮೇಲೆ, ಮಾನ್ಯ ಮುಖ್ಯಮಂತ್ರಿಗಳು 'ನಾನು ವಿಶ್ವಾಸ ಮತವನ್ನು move ಮಾಡುತ್ತೇನೆ' ಎಂದು ನಿಮ್ಮ permission ಸಹ ಕೇಳಲಿಲ್ಲ. ಅವರು ಮಂಡಿಸಲೂ ಇಲ್ಲ.

ಅಧ್ಯಕ್ಷರು : ಆ ರೀತಿ ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಈ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. See, you are there to decide.

MR. SPEAKER : Yes.

ಶ್ರೀ ಸಿದ್ದರಾಮಯ್ಯ : What has happened ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಅದನ್ನೇ short ಆಗಿ ಹೇಳಿ.

ಶ್ರೀ ಸಿದ್ದರಾಮಯ್ಯ : ನಾನು short ಆಗಿಯೇ ಹೇಳುತ್ತಿದ್ದೇನೆ. ಅದಕ್ಕೆ ಎಲ್ಲವನ್ನೂ jump ಮಾಡಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಮೊನ್ನೆ ದಿವಸ jump ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಏನು ಮಾಡುವುದು ? ನೀವು ನಮಗೆ jump ಮಾಡುವಂತಹ ಪರಿಸ್ಥಿತಿಗೆ ತಂದು ಇಟ್ಟು ಬಿಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೆ, ಅವರು ನಿಮ್ಮ permission ಕೇಳಿ move ಮಾಡಲಿಲ್ಲ. ನೀವು voice vote ನಲ್ಲಿ ಅಂಗೀಕಾರವಾಗಿದೆ ಎಂದು ತೀರ್ಮಾನ ಮಾಡಿದಿರಿ. ಅಂದು ವಿಶ್ವಾಸ

ಮತ ಯಾಚನೆ ಸರಿಯಾಗಿ ನಡೆದಿಲ್ಲ ಎಂಬ ಕಾರಣಕ್ಕಾಗಿಯೇ ಮಾನ್ಯ ರಾಜ್ಯಪಾಲರು ಮತ್ತೊಂದು ಸಾರಿ ಅವಕಾಶ ಕೊಟ್ಟಿರಬಹುದು ಎಂದು ನನಗನಿಸುತ್ತದೆ. ಆದರೆ ನನ್ನ ಪ್ರಕಾರ ಕರ್ನಾಟಕದ ಇತಿಹಾಸವಷ್ಟೇ ಅಲ್ಲ, ಇಡೀ ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಎರಡನೇ ಬಾರಿ ಬಹುಮತ ಸಾಬೀತು ಮಾಡಲಿಕ್ಕೆ ಅವಕಾಶ ಕೊಟ್ಟಿರುವುದು ಬಹಶಃ ಇದೇ ಮೊದಲು. ಮಾನ್ಯ ಯಡಿಯೂರಪ್ಪನವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ಅವರೂ ಸಹ ದೆಹಲಿಯಿಂದ statement ವೊಂದನ್ನು ಕೊಟ್ಟಿದ್ದರು. This is un-precedent, un-constitutional and illegal ಎಂಬುದನ್ನು ಅವರೂ ಒಪ್ಪಿಕೊಂಡಿದ್ದಾರೆ, ನಾವೂ ಹೇಳಿದ್ದೇವೆ. ಆದರೂ ಮಾನ್ಯ ರಾಜ್ಯಪಾಲರು ನಿಮಗೆ ಎರಡನೇ ಸಾರಿ ಬಹುಮತ ಸಾಬೀತು ಮಾಡಿ ಎಂದು ಹೇಳಿದ್ದಾರೆ. Because, you are bound by his direction, you have called this meeting, we have also obeyed your summons. ಇಲ್ಲಿಗೆ ಬಂದು ನಾವು attend ಮಾಡಿದ್ದೇವೆ. ಆದರೆ ನನ್ನ ಪ್ರಕಾರ ಅವತ್ತೇ ಆ report ಅನ್ನು ನೀವು ಮಾನ್ಯ ರಾಜ್ಯಪಾಲರಿಗೆ ಕೊಟ್ಟಿದ್ದಿರಿ. ಮಾನ್ಯ ರಾಜ್ಯಪಾಲರು ಅದನ್ನು farce report ಎಂದು ತೀರ್ಮಾನ ಮಾಡಿ, ಅವರು ಬಹಿರಂಗವಾಗಿಯೇ ಹೇಳಿಕೆ ಕೊಟ್ಟಿದ್ದಾರೆ. It is not my statement. He made a public statement. He addressed the media also. ಅದನ್ನು ಕಳುಹಿಸಿದ್ದಾರೆ. ಏಕೆಂದರೆ, ಇಲ್ಲಿ ಸರ್ಕಾರ ಬಹುಮತ ಕಳೆದುಕೊಂಡಿದೆ, ಕಾರಣ ಏಕೆಂದರೆ, ಅವತ್ತು ಸುಮಾರು 18 ಜನ ಶಾಸಕರು ಸದನದಿಂದ ಹೊರಗಡೆ ಉಳಿದಿದ್ದರು. ನೀವು 5 ಜನ ಪಕ್ಷೇತರರನ್ನು disqualify ಮಾಡಿದ್ದಿರಿ. ಆ ಮೇಲೆ 11 ಜನ ಬಿ.ಜೆ.ಪಿ. rebels ಅನ್ನು disqualify ಮಾಡಿದ್ದಿರಿ. Now they have challenged your orders. It is pending before the court. I am not going to comment on that. ಅದು ಅಲ್ಲಿ pendingನಲ್ಲಿದೆ. ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ಇವತ್ತೂ ಕೂಡ ಅದು final ordersಗೆ ಬಂದಿಲ್ಲ. ನಿನ್ನೆ High Courtನಲ್ಲಿ ordersವೊಂದನ್ನು ಮಾಡಿದ್ದಾರೆ. ಆ orders ಏನೆಂದರೆ, ನಿಮಗೆ

ಸುಮ್ಮನೆ ಅದರ last paraವೊಂದನ್ನು ತಮ್ಮ ಗಮನಕ್ಕೆ ತರುತ್ತೇನೆ. "Despite having recorded the opposite view, we are satisfied that the ends of justice would be met. In the facts and circumstances of the present case, if the proceedings in the Karnataka Legislative Assembly to be held on 14.10.2010, (today) are ordered to be subject to the final decision of the case. Ordered accordingly." ಇದು ಹೈಕೋರ್ಟಿನ ಆದೇಶವಾಗಿದೆ. ಇದರ ಪ್ರತಿ ನಿಮಗೂ ಸಿಕ್ಕಿದೆ. ನೀವೂ ಅದನ್ನು ಓದಿರುತ್ತೀರಿ. ನಾನು ಸುಮ್ಮನೆ ನಿಮ್ಮ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದೇನೆ. ಇದು ನಿಮ್ಮ ಹತ್ತಿರ ಕೂಡ ಇದೆ. Whatever would be the outcome of today's meeting, it is subject to the final decision on the pending writ petitions before the High Court. ಎಂದು ಹೇಳಿದ್ದಾರೆ. 5 ಜನ ಪಕ್ಷೇತರರು ನಿಮ್ಮ orders ಅನ್ನು ಕೋರ್ಟ್‌ನಲ್ಲಿ challenge ಮಾಡಿ ಹೊರಗಡೆ ಇದ್ದಾರೆ. 11 ಜನ ಇತರ ಶಾಸಕರೂ ಸಹ ನಿಮ್ಮ orders ಅನ್ನು challenge ಮಾಡಿ ಅವರೂ ಸಹ ಹೊರಗಡೆ ಇದ್ದಾರೆ. ಸುಮಾರು 16 ಜನ, they are outside the house. They cannot come to the house in view of your orders. ಅವರು ಇಲ್ಲಿಗೆ ಬರಲಿಕ್ಕಾಗುವುದಿಲ್ಲ. So, ನನ್ನ ಪ್ರಕಾರ their rights are infringed. Because, they cannot participate in the discussion, they cannot exercise their votes. ಆದ್ದರಿಂದ ಅವರು ಹಕ್ಕುಗಳಿಗೆ ಚ್ಯುತಿಯಾಗಿವೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. About Court I am not going to argue. On the merits of the case I am going to argue. According to my opinion, their rights are infringed ; they have not been allowed to participate ; they cannot exercise their votes and to that extent, they are denied their right in participating, voting and exercising their votes against or in favour of the resolution, vote of confidenc which is going to be moved today. So, this is the factual position. ಈ ತರಹ ಇರುವಾಗ ಮತ್ತೆ ಇನ್ನೊಂದು

ಸಾರಿ ಆದರೂ ಕೂಡ ನನ್ನ ಪ್ರಕಾರ ಇದು final ಆಗುವುದಿಲ್ಲ. ಇನ್ನೊಂದು ಸಾರಿ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಆಗಬಹುದು. Depending upon the court orders, ಆಗಬಹುದು, ಆಗದೇ ಇರಬಹುದು. I do not know. ಆಗ ಆ ಪರಿಸ್ಥಿತಿ ನಿರ್ಮಾಣ ಆಯಿತು. ಆ ಕಾರಣಕ್ಕೋಸ್ಕರ ನಾನು ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಿ. ಒಂದೇ ಸಾರಿ Court ನಿಂದ ಏನು judgment ಬರುತ್ತದೆ ಎಂದು ನೋಡೋಣ. Let us wait. 18ನೇ ತಾರೀಖು judgment ಬರಬಹುದು. ಸೋಮವಾರಕ್ಕೆ ಎಂದು ಹೋಗಿರುವುದು. Matter is posted to 18th Monday is 18th.

MR. SPEAKER : Monday for filing the objection.

ಶ್ರೀ ಸಿದ್ದರಾಮಯ್ಯ : ಯಾವತ್ತಾದರೂ ಆಗಲಿ, Monday ಆಗಬಹುದು, Tuesday ಆಗಬಹುದು, Wednesday ಆಗಬಹುದು...

MR. SPEAKER : You cannot say. Monday it is posted for objections. ಅದಕ್ಕೇ anticipate ಮಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ : O.K. ಅಧ್ಯಕ್ಷರೆ. Subject to correction.

MR. SPEAKER : My humble request is that we need not discuss the whatever.....

SRI SIDDARAMAIAH : I am not discussing on the merits again.

ಅಧ್ಯಕ್ಷರು : ಈಗ ತಾವು ಏನು ಹೇಳಿದಿರಿ ಎಂದರೆ ಸೋಮವಾರ ಆದೇಶ ಆಗಬಹುದು. How can you anticipate ? No. No. It is not fair.

SRI SIDDARAMAIAH : O.K. I have rectified that submission. ಅದು ಯಾವತ್ತು orders ಆಗುತ್ತದೆಯೋ ಆಗಲಿ, ಸೋಮವಾರ ಆಗಬಹುದು, ಬೇರೆ ಇನ್ನೊಂದು ದಿನ ಆಗಬಹುದು, depending upon the Courtನವರು ಯಾವತ್ತು ಮಾಡುತ್ತಾರೋ, we cannot say. ಅದು ಯಾವತ್ತು ಆದರೂ ಆಗಲಿ. ಆದ್ದರಿಂದ, ಅದು

ಆಗುವವರೆಗೂ ಎಂದು ನಾನು ಹೇಳುತ್ತಿದ್ದೇನೆ. ಅದು ಆಗುವವರೆಗೆ ಇದನ್ನು ಮಾಡುವುದರಿಂದ ಪ್ರಯೋಜನ ಅಥವಾ ಉಪಯೋಗ ಏನೂ ಆಗುವುದಿಲ್ಲ. ಆದ್ದರಿಂದ ಒಂದೇ ಸಾರಿ orders ಏನು ಬರುತ್ತದೆ ಎಂದು ನೋಡಿಕೊಂಡು ನಾವು ಇನ್ನೊಂದು ಸಲ ಸೇರಿ, ಅವರು ಇನ್ನೊಂದು ದಿವಸ ಪ್ರಸ್ತಾವ ತೆಗೆದುಕೊಂಡು ಬರಲಿ ನಾವೂ participate ಮಾಡುತ್ತೇವೆ, ಇವರು ವಿಶ್ವಾಸ ಮತ ಕಳೆದುಕೊಂಡರೆ let them come to know. ಈಗ as it is ಅವರು ವಿಶ್ವಾಸ ಕಳೆದುಕೊಂಡಿದ್ದಾರೆ, ಅದಕ್ಕೋಸ್ಕರ my request is please ....

ಅಧ್ಯಕ್ಷರು : No. No. Please. ನಿಮ್ಮ ಮಾತು ಮುಗಿಯುವುದಕ್ಕಿಂತ ಮುಂಚೆ ಎದ್ದು ನಿಂತುಕೊಳ್ಳುತ್ತಾರೆ, what is this ? ನೀವು ಗಲಾಟೆ ಮಾಡಬಾರದು ಎಂದು ಹೇಳುತ್ತೀರಿ. ತಾವು ಮಾತು ಮುಗಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಗಲಾಟೆ ಇಲ್ಲ.

ಅಧ್ಯಕ್ಷರು : Please ಕುಳಿತುಕೊಳ್ಳಿ, ರೇವಣ್ಣನವರೆ, ನೀವು ಯಾವತ್ತು ರೇಗಾಡುವುದನ್ನು ಬಿಟ್ಟಿದ್ದೀರಿ ?

ಶ್ರೀ ಸಿದ್ದರಾಮಯ್ಯ : ದಯವಿಟ್ಟು ಇವತ್ತು ಈ ಸಭೆಯನ್ನು ಮುಂದಕ್ಕೆ ಹಾಕಬೇಕು. ಎನ್ನುವುದು ನನ್ನ ಮನವಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಅವಕಾಶ ಕೊಡಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತಿನ ದಿವಸ ಏನು ಮನವಿಯನ್ನು ಮಾಡಿದ್ದಾರೆ ಅದರ ಬಗ್ಗೆ ಹೇಳುವುದಾದರೆ ರಾಜ್ಯಪಾಲರ ಪತ್ರದ ಆಧಾರದ ಮೇಲೆ ಈ ಸದನವನ್ನು ಕರೆಯಲಾಗಿದೆ. ಮಾನ್ಯ ರಾಜ್ಯಪಾಲರಿಂದ ಏನು ಸೂಚನೆ ಬಂದಿದೆ ಅಂದರೆ ಕೇವಲ ವಿಶ್ವಾಸ ಮತವನ್ನು ಯಾಚಿಸಬೇಕು ಎಂದು ಹೇಳುವಂತದ್ದು, ಒಂದು

ನಿರ್ಣಯವನ್ನು ಮಂಡಿಸಬೇಕು ಎಂದು ಹೇಳಿದ್ದಾರೆ. ಹಾಗೆಯೇ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸದನವನ್ನು ಮುಂದಕ್ಕೆ ಹಾಕಬೇಕು ಎಂದು ಏನು ಮನವಿಯನ್ನು ಮಾಡಿದ್ದಾರೆ, ಆ ಮನವಿಯನ್ನು ನಾನು ತಿರಸ್ಕರಿಸಿದ್ದೇನೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪವನ್ನು ಮಂಡಿಸಬೇಕು.

2. ವಿಶ್ವಾಸಮತ ಕೋರಿಕೆ:

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ :–

"ಈ ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಈ ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

ಎನ್ನುವ ಪ್ರಸ್ತಾವವನ್ನು ಅಂಗೀಕರಿಸುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಮಾನ್ಯ ಸದಸ್ಯರುಗಳು : ಹೌದು, ಹೌದು, ಹೌದು.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಚರ್ಚೆ ಇಲ್ಲವೇ ?

ಅಧ್ಯಕ್ಷರು : ಇಲ್ಲ. ಚರ್ಚೆಗೆ ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ : ಮತಕ್ಕೆ ಹಾಕುತ್ತೀರಾ ?

ಅಧ್ಯಕ್ಷರು : ಹೌದು.

(ಗೊಂದಲ)